**ತೆಲುಗು ಮೂಲ: ಪೆದ್ದಿಂಟಿ ಅಶೋಕ್‌ಕುಮಾರ್**
**ಕನ್ನಡಕ್ಕೆ: ಎಂ.ಜಿ. ಶುಭಮಂಗಳ**

ಕಲೆ: ಪ್ರವೀಣ್ ಆಚಾರ್ಯ

# ಪ್ರಾಣದ ಬೆಲೆ ನೂರು ಒಂಟೆಗಳು

ಈ ವಾರದಲ್ಲಿ ಅದೆಷ್ಟು ನೂರು ಬಾರಿ ಹೀಗಂದುಕೊಂಡಳೋ ಗೊತ್ತಿಲ್ಲ. ಕಣ್ಣು ಮುಚ್ಚಿದರೆ ಮತ್ತೊಮ್ಮೆ, 'ನಾನು ಅವರನ್ನು ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ' ಎಂದುಕೊಂಡಳು ಸಾವಿತ್ರಿ.

ಹಾಗಂದುಕೊಂಡ ಮರುಕ್ಷಣವೇ ಎಂದಿನಂತೆ, 'ಹಾಗಾದರೆ ಚಂದ್ರುವಿಗೆ ಮೋಸ ಮಾಡುತ್ತಿಲ್ಲ ತಾನೇ' ಎನಿಸಿತು.

ಕೂಡಲೇ, 'ಚಿಕ್ಕವನು. ನನ್ನ ಹೊಟ್ಟೆಗೆ ಬಿದ್ದಿರುವ ಬೆಂಕಿ ಅವನಿಗೇನು ಗೊತ್ತು?' ತನಗೆ ತಾನೇ ಹೇಳಿಕೊಂಡಳು.

ಅದು ದುಬೈನ ಮರಳುಗಾಡಿನಲ್ಲಿರುವ ಲೇಬರ್ ಕ್ಯಾಂಪ್‌ನ ಒಂದು ಕೋಣೆ.

ನಕಲಿ ಏ.ಸಿ. ಮಿಷನ್ ಪುಸ್ ಪುಸ್ ಎಂದು ಸದ್ದುಮಾಡುತ್ತಿದೆ. ಮಧ್ಯದಲ್ಲಿ ನೇತು ಹಾಕಿರುವ ಬೆಡ್‌ಲೈಟ್. ಎಷ್ಟು ಪ್ರಯತ್ನ ಪಟ್ಟರೂ ಸಾವಿತ್ರಿಗೆ ನಿದ್ದೆ ಹತ್ತುತ್ತಿಲ್ಲ. ಆರು ಗಂಟೆಯ ವಿಮಾನ ಪ್ರಯಾಣದ ನಂತರ ಇನ್ನೂ ಮೈ ಗಾಳಿಯಲ್ಲಿ ತೇಲುತ್ತಿರುವಂತೆಯೇ ಇದೆ. ಒಮ್ಮೆ ಅತ್ತಿಂದಿತ್ತ ತಿರುಗಿ ಬೆಡ್‌ಶೀಟ್ ಹೊದ್ದುಕೊಳ್ಳುತ್ತ ಚಂದ್ರುವನ್ನು ನೋಡಿದಳು.

ಅವನಿನ್ನೂ ನಿದ್ದೆ ಮಾಡದಿರುವುದನ್ನು ಗಮನಿಸಿ, "ದಿಯಾ ಅಂದರೆ ಏನೋ" ಕೇಳಿದಳು ಸಾವಿತ್ರಿ.

"ಬ್ಲಡ್ ಮನಿ" ಚಂದ್ರು ಹೇಳಿದ.

"ಅಂದರೆ???..."

"ರಕ್ತದ ರೊಕ್ಕ. ಮೃತರ ಕುಟುಂಬದವರಿಗೆ ನೀಡುವ ಪರಿಹಾರ."